



**ಲೇಖಕಿ**

**ಶ್ರೀ ಸಂದ್ಯಾ.ಬಿ.ಕೆ**

## ಸದ್ಗುರು ನಮಸ್ಕಾರ

ಸದ್ಗುರು ನಾಮಂ  ಸ್ಮರಾಮಿ

ಸದ್ಗುರು ನಾಮಂ ವದಾಮಿ

ಸದ್ಗುರು ಚಿನ್ತನಂ ಕರೋಮಿ

ಸದ್ಗುರು ಪಾದಂ ದರ್ಶಯಾಮಿ

ಸದ್ಗುರು ಪಾದಂ ಸ್ಪರ್ಶಯಾಮಿ

ಸದ್ಗುರು ಪಾದಂ ನಮಸ್ಕರೋಮಿ

ಸದ್ಗುರು  ಪಾದಂ  ಶರಣಮ್ ಅಹಮ್ ಪ್ರಪದ್ಯೇ

# ಓಂ  ಸರ್ವಮಯಂ

ಓಂ ಸರ್ವಂ ಶಿವ ಶಕ್ತಿ ಮಯಂ

ಓಂ ಸರ್ವಂ ಸಿದ್ಧ ಶಕ್ತಿ ಮಯಂ

ಓಂ ಸರ್ವಂ ನಾದ ಮಯಂ

ಓಂ ಸರ್ವಂ ಮಂತ್ರ ಮಯಂ

ಓಂ ಸರ್ವಂ ಜ್ಞಾನ ಮಯಂ

ಓಂ ಸರ್ವಂ ಪ್ರಜ್ಞಾ ಮಯಂ

ಓಂ ಸರ್ವಂ ಶುದ್ಧ ಮಯಂ

ಓಂ ಸರ್ವಂ ಸಂಪೂರ್ಣ ಮಯಂ

ಓಂ ಸರ್ವಂ ಪ್ರಸನ್ನ ಮಯಂ

ಓಂ ಸರ್ವಂ ಐಕ್ಯ  ಮಯಂ

ಓಂ ಸರ್ವಂ ಆನಂದ ಮಯಂ

ಓಂ ಸರ್ವಂ ಶಿವ ಪ್ರೇಮಾನಂದ ಮಯಂ

## <u>ಗುರು ಹಾಡು</u>

ಜಯ ಜಯ ಗುರು ಓಂ, ಪರಬ್ರಹ್ಮ ಗುರು ಓಂ

ಮೂಲವರ್ಗದ ಪರಂಪರೆಯ, ಗುರು ಪಾದಕ್ಕೆ, ನಮ ಓಂ

ಶರಣು ಶರಣು ಗುರು ಓಂ |ಪ|

ಕೈಲಾಸದಿಂದಲೀ ಭೂಮಿಗವತರಿಸಿ

ಶೈವ ಸಿದ್ಧಾಂತವ ಭೂಮಿಗೆ ತಂದಾ

ಗುರು ಪಾದಕ್ಕೆ , ನಮ ಓಂ, ಶರಣು ಶರಣು ಗುರು |೧|

ಮಾಯಾಂಧಕರಾದ ಅಜ್ಞಾನ ಪಾಶಾವ ಬಿಡಿಸೆ

ಶುದ್ಧಾದ್ವೈತಕ್ಕೆ ಕರೆದೊಯ್ದ

ಗುರು ಪಾದಕ್ಕೆ, ನಮ ಓಂ, ಶರಣು ಶರಣು ಗುರು ಓಂ | ೨|

ದೇಹ ದೇಗುಲವೆಂದೇ , ಅನ್ ಬೇ ಶಿವಂ ಎಂದೇ

ಶಿವೋಹಂ, ಶಿವೋಹಂ ಸಾರಿದ

ಗುರು ಪಾದಕ್ಕೆ, ನಮ ಓಂ, ಶರಣು ಶರಣು ಗುರು ಓಂ |೩|

ಹೋಮ ಹವನ ದಿಂದ, ಸಾಮೂಹಿಕ ಧ್ಯಾನದಿಂದ

ಶಿವ ಸಾಯುಜ್ಯ ಮುಕ್ತಿ ನೀಡಿದ

ಗುರು ಪಾದಕ್ಕೆ, ನಮ ಓಂ, ಶರಣು ಶರಣು ಗುರು ಓಂ |೪|

ಶ್ರೀವಿದ್ಯಾ ಸಾಧನೆಯ, ಶ್ರೀ ಚಕ್ರ ಪೂಜೆಯ

ಶಿವಯೋಗ ಸಾಧನಯ, ನೀಡಿದ

ಗುರು ಪಾದಕ್ಕೆ, ನಮ ಓಂ, ಶರಣು ಶರಣು ಗುರು ಓಂ |೫|

ಅರೋಗ್ಯ ಮಂತ್ರವ , ಮೂಲಾಂಜಿ ನವಕ್ಕರಿ ಮಂತ್ರವ,

ಜನ ಕಲ್ಯಾಣಕ್ಕೆ ನೀಡಿದ

ಗುರು ಪಾದಕ್ಕೆ, ನಮ ಓಂ, ಶರಣು ಶರಣು ಗುರು ಓಂ |೬|

ಜ್ಯೋತಿ ರೂಪಿ ಶಿವನೇ, ಸಚ್ಚಿದಾನಂದ ಶಿವನೇ,

ಅತೀತ ವಾದ ಶಾಶ್ವತ ಶಕ್ತಿ , ಪರಬ್ರಹ್ಮ ಗುರು ಓಂ |

ಶರಣು ಶರಣು ಗುರು ಓಂ |

ಶಿವ ಪ್ರೇಮಾನಂದ ಗುರು ಓಂ |

ಜಯ ಜಯ ಗುರು ಓಂ , ಶರಣು ಶರಣು ಗುರು ಓಂ |೭|

# ನಿಮಗೆ ನಮ್ಮ ವಂದನೆ

ಸಿದ್ದ ಯೋಗಿಯೇ ಜ್ಞಾನ ಜ್ಯೋತಿಯೇ
ಸ್ವರ್ಣ ವರ್ಣನೆ , ಸ್ವ ಪ್ರಕಾಶಾನೇ
ದೇವ ದೂತನೇ, ಲೋಕ ಪಾಲನೆ,
ನಿಮಗೆ ನಮ್ಮ ವಂದನೆ |೧|

ಪರಮ ಹಂಸನೆ, ಪೂರ್ಣ ಚಂದ್ರನೇ
ಸತ್ಯ ತತ್ತ್ವನೆ , ಅಣು ರೂಪನೇ
ಚಿರಂಜೀವಿಯೇ, ಜೀವ ಜ್ಯೋತಿಯೇ
ನಿಮಗೆ ನಮ್ಮ ವಂದನೆ | ೨|

ಜನ ಸೇವೆಗೆ ನಿಂತ ಯೋಗಿಯೇ
ಶುದ್ದ ಮನಸಿಗೆ ಒಲಿವ ದೇವನೇ
ಅಷ್ಟ ಸಿದ್ದಿಯ ನೀವ ಗುರುವೇ
ನಿಮಗೆ ನಮ್ಮ ವಂದನೆ |೩|

ಭೋಗಾರನಾಥರೇ, ಕ್ರಿಯಾ ಬಾಬಾನೇ
ಅಗಸ್ತ್ಯ ಮುನಿ, ಶ್ರೀ ರಾಮಲಿಂಗರೆ
ಅಷ್ಟದಶ ರೂಪದಿ, ನಿಂತ ಯೋಗಿಯೇ
ನಿಮಗೆ ನಮ್ಮ ವಂದನೆ |೪|

ಪ್ರೇಮ ಮೂರ್ತಿಯೇ ,ಪರಮ ತತ್ವನೆ
ಲೀಲೆ ವಿನೋದನೆ, ಲೋಕ ಸಂಚಾರನೇ
ಮೂಲವರ್ಗನೆ ಆತ್ಮ ಬಂದುವೇ
ನಿಮಗೆ ನಮ್ಮ ವಂದನೆ |೫|

## ಕರುಣೆಯನ್ನು ತೋರಯ್ಯ , ಹೇ ! ಗುರುದೇವ

ಕರುಣೆಯನ್ನು ತೋರಯ್ಯ , ಹೇ ! ಗುರುದೇವ
ಪಾಮರರ ಬದುಕನು ,  ಹಸನಾಗಿಸೋ  ಜೀಯ |ಪ|

ತ್ರಿಕರಣದಿ  ನೀ ನೆಲೆಸಿ ಶುದ್ದ ಭಾವಾವ ನೀಡೋ
ಇಳಯ ಭಾರವನು , ಹಗುರಾಗಿಸೋ ದೇವಾ
ಅಂತಹ ಕರಣದಿ ನಿಂತು , ದಯಾಭಾವದಿ ಬೆರವ
ಶುದ್ದ ಮನಸನು ನೀಡೋ, ಹೇ ! ಗುರುದೇವ !!

ಅನಂತ ಜ್ಯೋತಿಯು ನೀನು , ಸ್ವಪ್ರಕಾಶವು ನೀನು
ಆತ್ಮ ಬಂದುವು ನೀನು, ಕಾರುಣ್ಯ ನಿಧಿಯೇ
ಜೀವನದ ನೌಕೆಯಲಿ , ಅಂಬಿಗನು ನೀನಯ್ಯ
ಸಾಕ್ಷಿ ಭಾವದಿ ಮನ ನೆಲಸಿ, ಭವ ಪಾರು ಮಾಡಯ್ಯ .

ಮಗುವಂತೆ ಮನ  ನೀಡೋ , ಸತ್ಯ ದಾರಿಯ ನೆಡಸೋ
ಕಷ್ಟದಲ್ಲಿ ಕೈ ಹಿಡಿದು, ಮುಂದೆನ್ನ ನೆಡಸೋ
ತಪ್ಪಾದರೂ ನಮ್ಮ, ತಾಯಂತೆ  ಒಲೈಸೋ
ದೀನಳಾ ಮೊರೆ   ಕೇಳೋ , ಹೇ ! ಗುರುದೇವ  !!

ನಿನ್ನಂತೆ ಎನ್ನ ಮಾಡೋ, ಶಾಂತಿ ಸದ್ಗುಣ ನೀಡೋ
ಧರ್ಮ  ಯುದ್ದದಿ ಎನ್ನ, ಪಾರ್ಥ ಸಾರಥಿ ಯಾಗೋ
ಪಾದ ಸೇವೆಯ ನೀಡಿ,  ಸಾಯುಜ್ಯ ನೀಡಯಾ
ಜ್ಯೋತಿಯಾಗಿಸೋ ಎನ್ನ , ಹೇ ! ಗುರುದೇವ !!

# ಕೃಪಾ ಕರೋ ಗುರುದೇವ್

ಕೃಪಾ ಕರೋ ಗುರುದೇವ್ , ಹಂಪೇ ದಯಾ ಕರೋ ಭಗವಾನ್ |ಪ|

ಅನಂತ ರೂಪ್ ಮೇ, ತೇರ ಪೆಹಚಾನ್
ಅನೇಕ ನಾಮ್ ಹೇ, ಏಕ್ ಸಮಾನ್ |೧|
ಅನೇಕ ತಾ ಕಾ , ತೇರ ಗುಣಗಾನ
ಏಕತಾ ಹೇ , ತೇರ ಮಹಿಮಾ |೨|
ಬ್ರಹ್ಮ ಜ್ಞಾನ ಕಾ , ತು ಹೇ ಭಂಡಾರ್
ಹಮ್ ಪೆ ಬರ್ಸೊ , ಜ್ಞಾನ ಗಂಗಾ |೩|
ವಿಶ್ವ ವ್ಯಾಪ್ತ್ ಹೊ , ವಿರಾಟ ಚೇತನ
ಸಬ ಝುರೇ ಮೇ , ಆಪ್ ಹಿ ಆಪ್ ಹೋ |೪|
ಜನಮ್ ಜನಮ್ ಕಾ , ತೂ ಹೈ ಬಂಧೂ
ಜಗಾದೊ ದೊ ಹಮ್ ಕೋ , ಕರುಣಾ ಸಿಂಧು |೫|
ಜೀವನ್ ಸಾಗರ್ ಕಾ, ತೂ ನ್ಯಯಾ
ಬೂನ್ದ್ ಕೋ ಸಾಗರ್ , ಮೇ ಹೈ ಮಿಲನ |೬|
ಆನಂದ್ ಸಾಗರ್ ಕಾ, ತೂ ಪ್ರತಿರೂಪ್
ಅಮೃತ್ ಬರಸ್ತಾ, ತೇರೇ ನೈನಾ |೭|
ಸತ್ಯ ಹೊ ಶಿವ್ ಹೊ, ಸುಂದರ್ ತುಮ ಹೋ
ದಿಗ ದಿಗಂತರ , ಮೇ ತುಮ ವ್ಯಾಪ್ತ್ ಹೊ |೮|
ಶಿವ ಶಕ್ತಿ ಕಾ, ತೂ ಪ್ರತಿನಿಧಿ
ಜನ ಕಲ್ಯಾಣ್ ಹೈ , ತೇರಾ ಲಕ್ಷ್ಯ |೯|
ಮನ್ ಮಂದಿರ್ ಕಾ, ತೂ ಹೈ ಭಗವಾನ್
ತೆರೆ ಚರಣ್ ಪೆ, ಜೀವನ್ ಕುರುಬಾನ್ |

## ಗುರು ಪಾದ ಶರಣಂ

ಗುರು ಪಾದ ಶರಣಂ , ಗುರು ಪಾದ ಶರಣಂ
ಪರಬ್ರಹ್ಮ ರೂಪ , ಗುರು ಪಾದ ಶರಣಂ |
ಸಚ್ಚಿದಾನಂದ , ಗುರು ಪಾದ ಶರಣಂ
ಅನಾದಿ ಮೂರ್ತೆ, ಗುರು ಪಾದ ಶರಣಂ |ಪ|

ಅನ್ ಬೇ ಶಿವಂ, ಗುರು ಪಾದ ಶರಣಂ
ಕೈಲಾಸಾಧೀಶ , ಗುರು ಪಾದ ಶರಣಂ |
ಶಿವ ಶಕ್ತಿ ರೂಪ, ಗುರು ಪಾದ ಶರಣಂ
ಜ್ಯೋತಿ ಪ್ರಕಾಶ, ಗುರು ಪಾದ ಶರಣಂ |೧|

ಭವ ಪಾರು ಮಾಡೋ , ಗುರು ಪಾದ ಶರಣಂ
ಬಂಧ ವಿಮೋಚಕ , ಗುರು ಪಾದ ಶರಣಂ |
ಭವ ಭಯ ಹರಣ , ಗುರು ಪಾದ ಶರಣಂ
ಭಾಗ್ಯ ವಿಧಾತ , ಗುರು ಪಾದ ಶರಣಂ |೨|

ಸಿದ್ದ ಯೋಗಿಂದ್ರ ,ಗುರು ಪಾದ ಶರಣಂ
ಕರುಣಾ ಸಿಂಧು , ಗುರು ಪಾದ ಶರಣಂ |
ಭಾಸ್ಕರ ತೇಜ , ಗುರು ಪಾದ ಶರಣಂ
ದಿವ್ಯ ಸ್ವರೂಪ , ಗುರು ಪಾದ ಶರಣಂ |೩|

ಜ್ಞಾನ ಪ್ರದಾತ, ಗುರು ಪಾದ ಶರಣಂ
ಮೂಲಾಂಜಿ ದೇವಾ , ಗುರು ಪಾದ ಶರಣಂ |
ಶಿವ ಪ್ರೇಮಾನಂದ , ಗುರು ಪಾದ ಶರಣಂ
ಮೂಲವರ್ಗ ಪರಂಪರೆ, ಗುರು ಪಾದ ಶರಣಂ |೪|

## ಗುರು ಪೂಜೆ

ಗುರುವಿನ ಮಹಿಮೆಯ ಪಾಡಿ (ಸದ್ಗುರುವಿನ)
ಗುರು ಬಾಂಧವರೆಲ್ಲ ,ಕೂಡಿ ಒಂದಾಗಿ |ಪ|

ಕೃಪಾ ಸಾಗರನ ನೆನೆದು
ಘನ ಮಹಿಮನ , ಧ್ಯಾನವ ಬಿಡದೆ ಮಾಡಿ |
ಗುರು ಸಾರಿದ , ನೀತಿ ತತ್ವ
ನಿತ್ಯ ಜೀವನದಿ, ನೀವು ಬಿಡದೆ ಪಾಲಿಸಿರಿ |೧|

ಅರಿಷಡ್ ವರ್ಗವ ಅಳಿಸಿ
ಮಾಯಾ ಧೂಳನು ಒರಸೀ , ಮನ ಶುಭ್ರ ಗೊಳಿಸಿ |
ಜನ್ಮ ಜನ್ಮದ ಸುಕೃತದಿ
ಗುರು ಪಾದ ಪೂಜೆಯ , ಭಾಗ್ಯವ ಹೊಂದಿ |೨|

ಸಪ್ತ ಚಕ್ರದ ನಿಮ್ಮ ದೇಹದಿ
ಗುರು ಪಾದುಕೆ ಇಟ್ಟು, ಗುರು ಮಂತ್ರ ಜಪಿಸಿ|
ಕೃತಜ್ಞತೆ ಭಾವ , ಎಂಬ ಪುಷ್ಪದಿ
ಗುರು ಪಾದಕೆ, ನೀವು ಅರ್ಚನೆ ಗೈರಿ |೩|

ಶಾಂತ ಚಿತ್ತದಿ ಕೂಡಿ
ಅರಿವೆಂಬ ಅಸ್ತ್ರದಿ , ಅಂತರಂಗದಿ ಮುಳುಗಿ |
ಸೋಹಂ ಮಂತ್ರ ಸೂತ್ರ ಪಿಡಿದು
ಗುರು ಪಾದಕೆ , ಭಕ್ತಿಲಿ ನೀವು ಶರಣಾಗಿ |೪|

ಆತ್ಮ ಜ್ಯೋತಿಯ ಬೆಳಗಿ
ಗುರು ಕಾರುಣ್ಯವೆಂಬ ಸಾಗರದಿ ಮುಳುಗಿ |
ಪ್ರಣವ 'ಓಂ' ನಾದ ಆಲಿಸಿರಿ

ಸಚ್ಚಿದಾನಂದ ಸುಖದಿ ತೃಪ್ತಿಯ ಹೊಂದಿ |೫|

## ಎಲ್ಲಿ ಇರುವ ಶಿವ

ಶಿವ ಶಿವ ಎಲ್ಲಿ ಇರುವನೋ , ಸದ್ಗುರುನಾಥನೇ
ಶಿವ ಶಿವ ಹ್ಯಾಂಗೆ ಇರುವನೋ |ಪ|

ಅಲ್ಲಿ ಉಂಟು ಇಲ್ಲಿ ಉಂಟು
ಸಕಲ ಸೃಷ್ಟಿಯಲ್ಲವನು ಉಂಟು ;
ಭಾನು ಭೂಮಿ ಪಂಚಭೂತಗಳ ಲ್ಲೋ
ಸಕಲ ಬ್ರಹ್ಮಾಂಡದಲ್ಲೋ |೧|

ಕೈಲಾಸದ ಪರ್ವತದಲ್ಲೋ
ನಂದಿಯ ದೃಢ ದೃಷ್ಟಿಯಲ್ಲೊ
ಗಣಗಳ ಸೇವೆಯಲ್ಲೋ
ಕೇದಾರದ ಚಾರು ಧಾಮದಲ್ಲೊ |೨|

ಬೇಧ ಭಾವ ಅವಗೆ ಇಲ್ಲವಂತೆ
ಕಣ್ಣಿಗೆ ತಾ ಕಾಣನಂತೆ
ಹುಡುಕಿದರು ಅವ ಸಿಗನಂತೆ
ತನಲ್ಲೇ ತಾ ನಿರುವನಂತೆ |೩|

ಯೋಗಿಯ ಹೃದ್ ಮಿಡಿತದಲ್ಲೋ
ಭಕ್ತರ ಭಾವ ಭಜನೆಯಲ್ಲೋ
ನಾಥರ ಕಠಿಣ ಯೋಗದಲ್ಲೋ
ಶಕ್ತಿಯ ಒಂದು ಭಾಗದಲ್ಲೋ |೪|

ಶಾಂತಿ ಪ್ರೀತಿ ಕರುಣೆಯಲ್ಲಿ

ನಿರ್ಮಲವಾದ ಮನದಲ್ಲಿ |

ಸರಳವಾದ ಭಕ್ತಿಯಲ್ಲಿ

ಶರಣರ ಸೇವೆಯಲ್ಲಿ |

ಸಿದ್ಧರ ಹೃತ್ಕಮಲದಲ್ಲಿ

ಆನಂದದ ಸಾಗರದಲ್ಲಿ | ೫|

ಶಿವ ಶಿವ ಇರುವನಯ್ಯಾ

|ನಮ್ಮ|  ಶಿವ ಶಿವ ಇರುವನಯ್ಯಾ

# <u>ಸದ್ಗುರುದೇವ ಬಂದೆ</u>

ಸದ್ಗುರುದೇವ ಬಂದೆ , ಮೂಲಾಂಜಿ ಗುರುವೇ ಬಂದೇ
ಭುವಿಗೆ ನೀನು ಬಂದೇ , ಈ ಮೂರ್ತಿಯಲ್ಲಿ ನಿಂದೆ |ಪ|

ಜಟೆಯನ್ನು ಧರಿಸಿ , ಕಸ್ತೂರಿ ತಿಲಕವಿಟ್ಟು
ರುದ್ರಾಕ್ಷಿ ಮಾಲೆ ಧರಿಸಿ , ಭಸ್ಮದಲ್ಲಿ ಮಿಂದು |೧|

ಕತ್ತಲನ್ನು ಸರಿಸಿ ಬೆಳಕನ್ನು ಬೀರಿ
ರವಿತೇಜನೂ ಬಂದೇ , ಪೂರ್ಣಚಂದ್ರನೂ ಬಂದೇ |೨|

ಅಮೃತ ಕಲಶ ಪಿಡಿದು , ಪ್ರೇಮ ಮೂರ್ತಿಯೂ ಬಂದೇ
ಅಮೃತ ಗಂಗೆ ಹರಿಸಿ , ಈ ಜನಕಾಗಿ ನಿಂದೆ |೩|

ತಪವನ್ನು ಮಾಡಿ , ಸಮಾಧಿಯಲ್ಲಿ ನೆಲಸಿ
ತಿರುಮಂದಿರಂ ಬರೆದು, ಶಿವಶಕ್ತಿ ಜ್ಞಾನ ನೀಡಿ |೪|

ಶಿವಾಂಶನೂ ಬಂದೇ, ಪರಮ ತತ್ವ ಜ್ಞಾನ ತಂದೆ
ಸಿದ್ಧಪುರುಷ ಬಂದೇ, ಶಿವಯೋಗಿಯೂ ಬಂದೇ |೫|

ಸಿದ್ಧಲೋಕದಿಂದ ಬಂದೇ, ನವಕ್ಕರಿ ನಾದವನು ತಂದೆ
ಜ್ಞಾನ ಜ್ಯೋತಿ ಬೀರಿ, ಶಿವಪ್ರೇಮಾನಂದವ ತಂದೆ |೬|

ಮೂಲವರ್ಗ ಗುರುವೇ , ನಾ ಬೇಡಿಕೊಂಬೆ ಶಿವನೇ
ಪಾದಸೇವೆ ನೀಡಿ, ಪಾಲಿಸೆನ್ನ ಪ್ರಭುವೇ |೭|

ಶಿವಾಂಶನೂ ಬಂದೇ , ಶಿವ ಯೋಗಿಯೂ ಬಂದೇ
ಸಿದ್ಧಪುರುಷ ಬಂದೇ , ಮೂಲಾಂಜಿ ಗುರುವೇ ಬಂದೇ |೮|

# <u>ಗುರು ಪೂಜೆ</u>

ಇನ್ನೇನು ಬೇಕು, ಸದ್ಗುರು ಎನಗೆ
ನಿನ್ನ ಒಲುಮೆ ಒಂದೇ , ಸಾಕೆನಗೆ |ಪ|

ಜನ್ಮ ಜನ್ಮದಿ, ಬೆಂದು ಬಳಲೀ
ಸತ್ಯವನರಿಯದೆ ಅಲೆದಲೆದು |
ಸದ್ಗುರು ಕಂಡೆನೋ , ಹೃದಯ ಕಮಲದೀ
ದೇಹವೆ ದೇಗುಲ ವೆಂದರಿತೆನೋ |೧|

ಪಂಚಭಕ್ಷ್ಯ ಪರಮಾನ್ನ ವೈಭೋಗಕ್ಕಿಂತ
ಪಂಚಾಕ್ಷರಿ ಧ್ಯಾನ ಎನ್ನೊಲುಮೆ |
ಜಪ ತಪ ಸಾಧನ ಅಭಿಷೇಕಕ್ಕಿಂತಾ
ಗುರುಸೇವೆಯೊಂದೇ ಸೌಭಾಗ್ಯ |
ನವನಿಧಿ , ಅಷ್ಟಸಿದ್ಧಿ ಯಾಕೆನಗೆ
ಗುರುಕೃಪೆಯೊಂದೇ ಸಾಕೆನಗೆ |೨|

ತೀರ್ಥಕ್ಷೇತ್ರ ಪುಣ್ಯಸ್ನಾನ , ವ್ರತ ನಿಯಮಕ್ಕಿಂತ
ಗುರು ಸಾನಿಧ್ಯವೇ ಅನುಗ್ರಹವೂ |
ಹರಿದ್ವಾರ ಹೃಷಿಕೇಶ ಮಾನಸಯಾತ್ರೆಕ್ಕಿಂತ
ಅಂತರಂಗ ಶಿವನೊಬ್ಬ ಎನ್ನಲುಮೆ |
ರವಿ, ಶಶಿ, ಬುಧ, ಶುಕ್ರ ನವಗ್ರಹದೀ
ಗುರುಬಲ ಒಂದೇ ಸಾಕೆನಗೆ |೩|

ಮೂಲಾಧಾರ ಸ್ವಾಧಿಷ್ಠಾನ ಸಹಸ್ರಾರದಿ
ಮೂಲಾಂಜಿ ಗುರುಪಾದ ಸಾಕೆನಗೆ |
ಧ್ಯಾನಾಭ್ಯಾಸ ಶಿಷ್ಟಾಚಾರ ದಿನಚರ್ಯದಿ
ನಮ್ರತೆ ಯೊಂದೇ ಸಾಕೆನಗೆ |
ದ್ವಾದಶ ಜ್ಯೋತಿರ್ಲಿಂಗ , ನವಶಕ್ತಿ ಪೀಠದಿ
ಮೂಲವರ್ಗ ಮಂದಿರ , ಸಾಕೆನಗೆ |೪|

## ಗುರು ಭಜನ್

ಓಂ ಮೂಲಾಂಜಿ , ಓಂ ಮೂಲಾಂಜಿ
ಎನ್ನ, ಸದ್ಗುರುದೇವ ತಿರುಮೂಲಾಂಜಿ |ಪ|

ಯೋಗಿರಾಜನೇ , ಸಿದ್ದ ಪುರುಷನೇ
ಕೈಲಾಸದಿಂದ ಧರೆಗೆ ಇಳಿದ ಶಿವಶಕ್ತಿಯು ನೀವೇ |
ಮೂರುಸಾವಿರ ವರುಷ ತಪವ ಗೈದು
ತಿರುಮಂದಿರಂ ಬರೆದ ಸದ್ಗುರುವು ನೀವೇ |೧|

ಬಂಧುವು ನೀವೇ , ಬಳಗವು ನೀವೇ
ತ್ರಿವಿಧ ತಾಪವ ಹರಣವ ಗೈವ, ಕರುಣಾ ಸಿಂಧುವು ನೀವೇ |
ಕಲ್ಪವೃಕ್ಷವೂ , ಕಾಮಧೇನುವೂ
ಬೇಡಿದ ವರವ, ನೀವ ಭಕ್ತ ಬಂಧುವು ನೀವೇ |೨|

ಅಣುವು ನೀವೇ , ಬ್ರಹ್ಮಾಂಡವೂ ನೀವೇ
ಕಣ ಕಣದ್ಲಲಿರುವ , ಶಿವ ಸ್ವರೂಪವೂ ನೀವೇ |
ಜ್ಯೋತಿಯೂ ನೀವೇ , ಪ್ರಕಾಶವೂ ನೀವೇ
ಪಂಚ ಭೂತ , ಗ್ರಹ ನಕ್ಷತ್ರ , ಜ್ಯೋತಿರ್ಲಿಂಗವೂ ನೀವೇ |೩|

ದೇಹವೂ ನೀವೇ , ಪಂಚ ಪ್ರಾಣವು ನೀವೇ
ಏಳು ಚಕ್ರದಿ ನೆಲೆಸಿಹ , ಪ್ರಣವ ಸ್ವರೂಪವೂ ನೀವೇ |
ದೇಹ ದೇಗುಲದ, ದೈವವೂ ನೀವೇ
ಅನ್ ಬೇ ಶಿವಂ ಸಾರಿದ, ಕೃಪಾ ಸಾಗರ ನೀವೇ |೪|

ಜನ್ಮ ಜನ್ಮದ ಬಂಧುವು ನೀವೇ
ಭವ ಪಾರು ಮಾಡುವ, ಸದ್ಗುರುವು ನೀವೇ |
ಕಾಲವೂ ನೀವೇ, ಮಹಾಕಾಲವೂ ನೀವೇ
ಆಕಾಶಗಂಗೆಯಲ್ಲಿರುವ , ಶ್ಯಾಮಾ ಛಿದ್ರವು ನೀವೇ |೫|

# <u>ಸೇವಾ ಭಾಗ್ಯ</u>

ಸಿಕ್ಕಿತೆನಗೆ ಸಿಕ್ಕಿತೆನಗೆ , ಗುರು ಸೇವೆ ಭಾಗ್ಯವದು
ದೊರಕಿತೆನೆಗೆ   ದೊರಕಿತೆನಗೆ ,  ಗುರು ಪಾದ ದರ್ಶನವು |ಪ|

ಪೂರ್ಣಚಂದ್ರು ಪರಮಹಂಸ, ಜ್ಞಾನಸಾಗರನಿವನು
ಜ್ಞಾನ ಭೋದೆಯ ನೀಡಿ ಪರಿಪಾಲಿಸುವನು |
ಭವ ಪಾರು ಮಾಡೋ ,  ಅಂಬಿಗನಿವನಯ್ಯಾ
ಜೀವನ್ಮುಕ್ತನು, ಜಗಜ್ಯೋತಿಯು ಇವನು  |೧|

ಪರತರ ವಸ್ತುವಿಗಿಂತ ಅತ್ಯಮೂಲ್ಯನು ಇವನು
ಪರಾತ್ಪರನು , ಪರಮ  ಪೂರುಷನಿವನು |
ಜಗದ ಜಂಜಾಜಟದಿ ದೂರ , ಕೂರ್ಮ ರೂಪನು ಇವನು
ನೀಲ ಮೇಘದಹಾಗೆ ವಿಸ್ತಾರನಿವನು  |೨|

ನದಿಯ  ಕಮಲದಹಾಗೆ  ನಿರ್ಮಲಾನಿವನು
ನವ ಜಾತಾ ಶಿಶುವಿನಂತೆ, ಕೋಮಲಾನಿವನು |
ನವನೀತದಂತೆ ಮೃದು ಭಾಷಿ ಇವನು
ಶ್ವೇತವರ್ಣ  ಹಂಸದಂತೆ  ನ್ಯಾಯ ಮಾಡುವನಿವನು |೩|

ಜನ್ಮ ಜನ್ಮದ ಪಾಪ , ಕಳೆವ ಕರುಣಾ ಮೂರ್ತಿ
ಇಳೆಯ ಭಾರವ ಇಳಿಸಿ , ಆತ್ಮ ಜಾಗ್ರುತಿಸುವನು |
ಶಿವ ಶಕ್ತಿ ರೂಪದಿ , ಜಗ ಉದ್ಧರಿಪನಿವನು
ಕೋಟಿ  ಜನ್ಮದ ಪುಣ್ಯದಿ , ದೊರೆತ ಸದ್ಗುರು ಎಮಗೆ  |
ಮತ್ತೇನು ಬೇಕಿಲ್ಲ , ಗುರು ಸೇವೆ ಸಾಕೆನಗೆ  |೪|

# ಜ್ಞಾನ ದೀಪ್

ದೀಪ್ ಜಲೇ ಜಗಮೆ , ಶುದ್ದ ಜ್ಞಾನ ಕಾ

ದೀಪ್ ಜಲೇ ಜಗಮೆ , ಸಿದ್ದ ಜ್ಞಾನ ಕಾ , ದೀಪ್ ಜಲೇ ಜಗಮೆ |ಪ|

ಇಸ್ ಜ್ಯೋತೀ ಕೆ , ಕಿರಣೋಂ ಸೇ

ತನ್ ಮನ್ ಪ್ರಜ್ಞಾ ಜಗೇ |೧|

ಅಜ್ಞಾನ ಕಾ ಅಂಧಕಾರ ಮಿಟಾ ಕೆ

ಜ್ಞಾನ ಕೆ ದೀಪ್ ಸೆ , ಆತ್ಮ ಜಗಾದೊ |೨|

ಜನಮ್ ಜನಮ್ ಕಾ ಮೈಲ್ ಕೋ ಧೊಕೇ

ಶುದ್ದ ಪ್ರಕಾಶ್ ಸೆ , ಉಜ್ವಲ್ ಹೊ ಸಂಸಾರ |೩|

ಶಿವ ಶಕ್ತಿ ಕಾ ಪ್ರೇಮಾಮೃತ್ ಸೆ

ಪ್ರಜ್ವಲ್ ಹೊ ಬ್ರಹ್ಮಾಂಡ |೪|

ಆವಿರತ್ ಜ್ಞಾನ ಕಾ ರಸ್ ಜೋ ಪೀಕೆ

ಶಿವಪ್ರೇಮಾನಂದ್ ಸಾಗರ್ ಮೇ , ಡೂಬೋ |೫|

ಬಿನ್ ಬಾತಿ , ಬಿನ್ ತೈಲ್ ಕಾ ದೀಯಾ

ಸದ್ಗುರು ನೇ ಜೋ , ಜಗಾಯಾ |೬|

ದೀಪ್ ಸೆ ದೀಪ್ , ಕೋ ಜಗಾಕೆ

ಬ್ರಹ್ಮ ಜ್ಞಾನ ಕಾ, ಹೊ ವಿಸ್ತಾರ್ |೭|

# <u>ಆರತೀ ಹಾಡು</u>

ಆರತೀ ಗುರುದೇವನಿಗೆ , ಯೋಗಿಗೆ  ಸಿದ್ಧ ಯೋಗಿಗೆ
ಕೈಲಾಸದಿಂದಲಿ ಬಂದವಗೆ , ತಿರುಮೂಲಾರ್  ಸದ್ಗುರುದೇವನಿಗೆ  |ಪ|

ಅಮೃತಶಿಲೆಯಲಿ ನಿಂದವಗೆ , ಅಭಯ ಹಸ್ತವ ತೋರ್ದವಗೇ
ದಂಡ ಕಮಂಡಲ ಪಿಡಿದವಗೆ , ಭಸ್ಮ ವಿಭೂತಿ  ಬಳಿದವಗೆ   |೧|

ಅಷ್ಟದಶ ರೂಪದಿ ನಿಂದವಗೆ ,  ತಿರುವಾಡುತುರೈ  ಕ್ಷೇತ್ರದಿ ನೆಲೆದವಗೆ
ಅಂಗಲಾಚಿ ಬಂದ  ಭಕ್ತರಿಗೆ , ಪ್ರೇಮ ಮೂರ್ತಿಯೇ ಆದವಗೆ  |೨|

ತಿರುಮಂದಿರಂ  ಬರೆದವಗೆ ,  ಅನ್ ಬೇ  ಶಿವಂ ಎಂದವಗೆ
ದೇಹವೇ ದೇಗುಲ ಎಂದವಗೆ ,  ನವಕ್ಕರಿ ಮಂತ್ರದ ದಾತನೆಗೆ   |೩|

ಶಿವೋಹಂ  ಶಿವೋಹಂ ಸಾರ್ದವಗೆ , ಶಿವಕಾಮೇಶ್ವರೀ ಪುತ್ರನಿಗೆ
ಶಿವಯೋಗ ಸಾಧನೆ ದಾತನೆಗೆ ,  ಮೂಲವರ್ಗವ  ಪಾಲಿಪೆಗೆ   |೪|

ಆತ್ಮ ಜ್ಯೋತಿಯ ಬೆಳಗಿರಿ,  ಆರ್ತ ಹೃದಯದಿ ಬೇಡಿರಿ
ಭಕ್ತಿಯಿಂದಲಿ ಪಾಡಿರಿ ,  ದೈವಿಕ ಯೋಗವೆ  ಆಗಲೀ   |೫|

# ಶರಣು ಶಿವಕಾಮೇಶ್ವರಿ

ಶರಣು ಶಿವಕಾಮೇಶ್ವರಿ ; ಶರಣು ಅಮ್ಮ ಶರಣು |
ಶರಣು ಭಕ್ತ ವರ ಪ್ರದಾಯಿನಿ ; ಶರಣು ಸಂಕಟ ಹಾರಿಣೀ |ಪ|

ಶರಣು ಮೂಲವರ್ಗ ಗುರು ಸ್ವರೂಪಿಣಿ ; ಶರಣು ಗುರು ಮಂಡಲ ರೂಪಿಣಿ |
ಶರಣು ದಕ್ಷಿಣಾ ಮೂರ್ತಿ ರೂಪಿಣಿ ; ಶರಣು ಜ್ಞಾನ ಪ್ರದಾಯಿನಿ |೧|

ಶರಣು ಪಾಶಾಂಕುಶ ಧಾರಿಣಿ ; ಶರಣು ಮಾಯಾ ಸ್ವರೂಪಿಣಿ |
ಶರಣು ಕಾರಣ ರೂಪಿಣಿ ; ಶರಣು ಮಹಿಷಮರ್ದಿನಿ |೨|

ಶರಣು ತಂತ್ರ ರೂಪಿಣಿ ; ಶರಣು ಯೋಗ ಸ್ವರೂಪಿಣಿ |
ಶರಣು ಸಚ್ಚಿದಾನಂದ ರೂಪಿಣಿ ; ಶರಣು ಪರಬ್ರಹ್ಮಸ್ವರೂಪಿಣಿ |೩|

ಶರಣು ರಾಜಶ್ಯಾಮಲಾ ; ಶರಣು ಅನ್ನಪೂರ್ಣೆ ; ಶರಣು ವರಾಹ ಸ್ವರೂಪಿಣಿ |
ಶರಣು ಸಂಪತ್ಕಾರಿಣಿ ; ಶರಣು ಅಶ್ವಾರೂಢ ; ಶರಣು ಬಾಲ ತ್ರಿಪುರಸುಂದರಿ |೪|

ಶರಣು ಪರವಿದ್ಯಾ ರೂಪಿಣಿ ; ಶರಣು ಮಹಾ ಷೋಡಶಿ |
ಶರಣು ಮುಕ್ತೇಶ್ವರಿ ; ಶರಣು ಮೋಕ್ಷ ಪ್ರದಾಯಿನಿ |೫|

ಶರಣು ಶಿವ ಸ್ವರೂಪಿಣಿ ; ಶರಣು ಪ್ರೇಮಾನಂದ ರೂಪಿಣಿ |
ಶರಣು ಶಿವ ಪ್ರೇಮಾನಂದ ರೂಪಿಣಿ |೬|

# <u>ನಾದ ಶರೀರಿಣೀ ಶಿವಕಾಮೇಶ್ವರಿ</u>

'ಓಂ' ಕಾರ ನಾದಿನಿ ಶಿವಕಾಮೇಶ್ವರಿ

'ಝೀಂ' ಕಾರ ನಾದಿನಿ ಜಗತ್ ಜನನಿ |೧|

'ಗಂ' ಕಾರ ನಾದಿನಿ ವಿಘ್ನ ವಿನಾಶಿನಿ

'ಐಂ' ಕಾರ ನಾದಿನಿ ವಾಗದೀಶ್ವರಿಯೇ |೨|

'ಹ್ರೀಂ' ಕಾರ ನಾದಿನಿ ಭುವನೇಶ್ವರಿಯೇ

'ಶ್ರೀಂ' ಕಾರ ನಾದಿನಿ ಹೃತ್ಕಮಲ ವಾಸಿನಿ |೩|

'ದುಂ' ಕಾರ ನಾದಿನಿ ದುರ್ಗತಿ ನಾಶಿನಿ

'ಕ್ಲೀಂ' ಕಾರ ನಾದಿನಿ ಕಾಳಿ ಸ್ವರೂಪಿಣಿ |೪|

' ಏಮ್ ' ಕಾರ ನಾದಿನಿ ಸರ್ವಾನಂದ ದಾಯಿನಿ

' ಕ್ರೋಮ್ ' ಕಾರ ನಾದಿನಿ ಸರ್ವರಕ್ಷಕರಿಯೆ |೫|

ನಾದ ಶರೀರಿಣೀ ನವಕ್ಕರಿ ನಾಯಕಿ |

ಸಿದ್ಧೇಶ್ವರಿಯೇ ಸದ್ಗತಿದಾಯಿನಿ |೬|

ಪ್ರಣವ ಶರೀರಿಣೀ ಶಿವಾನಂದ ದಾಯಿನಿ |

ಮೂಲವರ್ಗೇಶ್ವರಿ ಪರಮಪದ ದಾಯಿನಿ |೭|

# <u>ಬಾರಮ್ಮಾ ತಾಯೆ ಶಿವಕಾಮೇಶ್ವರಿ</u>

ಬಾರಮ್ಮಾ ತಾಯೆ ಬಾರಮ್ಮಾ ; ಶಿವಕಾಮೇಶ್ವರಿ ಬಾರಮ್ಮಾ
ಗೆಜ್ಜೆ ನಾದದಿ ಬಂದು ನಿಲ್ಲಮ್ಮಾ ; ಮಂದಹಾಸದಿ ನಮ್ಮ ಹರಸಮ್ಮಾ |ಪ|

ಮನದಾಸೆಯಾ ಈಡೇರಿಸೋ ,  ವಾಂಛಕಲ್ಪಲತ  ಗಣಪತಿಯೇ, ನೀ ಬಾರಮ್ಮಾ |
ಸರ್ವ ಕಾರ್ಯದಿ ಸಿದ್ಧಿ ನೀಡುವ , ಬಗಳಾಮುಖಿ ನೀ  ಬಾರಮ್ಮಾ  |೧|

ವೀಣಾ ಪಾಣಿಯೇ ಬಾರಮ್ಮಾ, ನಾದ ಸ್ಪಂದನ ನೀಡಮ್ಮಾ
ಬಾರಮ್ಮಾ ತಾಯೆ ಬಾರಮ್ಮಾ,  ಮಾತಂಗೇಶ್ವರೀ  ಬಾರಮ್ಮಾ |೨|

ಕೆಟ್ಟ  ದೃಷ್ಟಿಯ  ನೀವಾರಿಸೋ , ವಾರಾಹಿಯೇ  ನೀ  ಬಾರಮ್ಮಾ |
ದುಷ್ಟ ಶತ್ರುವ ಬಡಿದೋಡಿಸೋ , ಪ್ರತ್ಯಂಗಿರೆ  ನೀ  ಬಾರಮ್ಮಾ |೩|

ನವ ಶಕ್ತಿಯ ಪ್ರತಿಪಾದಿಸೋ ,  ನವದುರ್ಗಿಯೇ ನೀ  ಬಾರಮ್ಮಾ |
ಶ್ರೀವಿದ್ಯೆಯಾ  ನೀಡುವಂತ ,  ಶಿವಪ್ರೇಮಾನಂದೆಯೇ ನೀ ಬಾರಮ್ಮಾ |೪|

'ಶ್ರೀಂ'  ಶಕ್ತಿಯೇ ನೀ  ಬಾರಮ್ಮಾ;  'ಹ್ರೀಂ'  ನಾದದಿ ನೀ  ಬಾರಮ್ಮಾ  |
ಮುಕ್ತೇಶ್ವರಿ  ನೀ  ಬಾರಮ್ಮಾ ;  ಮುಕ್ತಿಯಾ ನೀನು ನೀಡಮ್ಮಾ  |೫|

ಸರ್ವರ ಪರಿಪಾಲಿಸೋ ,   ಲಲಿತಾಂಬಿಕೆ  ನೀ ಬಾರಮ್ಮಾ |
ಮೂಲವರ್ಗವ  ಪರಿಪೋಷಿಸೋ  ,  ಮೂಲಾಂಜಿಯೇ ನೀ  ಬಾರಮ್ಮಾ |೬|

## ಶಿವಕಾಮೇಶ್ವರಿ ಅಕ್ಷರಮಾಲಾ ಹಾಡು

ಶಿವಕಾಮೇಶ್ವರಿಯೇ || ಅಂಬಾ || ಶಿವಕಾಮೇಶ್ವರಿಯೇ |

ಸರ್ವಾಂತರಯಾಮಿನಿ | ಹೃದಯ ನಿವಾಸಿನಿ | ತ್ರಿಲೋಕಪಾವನಿಯೇ |
|| ಅಂಬಾ || ಶಿವಕಾಮೇಶ್ವರಿಯೇ |

ಅನಂತ ರೂಪಿಣಿ | ಅನಾಥ ರಕ್ಷಕಿ | ಆಪದ್ಬಾಂಧವಳೇ |

ಅನೇಕ ಕೋಟಿ ಬ್ರಹ್ಮಾಂಡ ಜನನಿ | ಅಗಣಿತ ಮಹಿಮಳೆ |

|| ಅಂಬಾ|| ತ್ರಿಲೋಕಪಾವನಿಯೇ |

ಇಳೆಯನು ಪಾಲಿಪೆ | ಈಶ್ವರ ವಾಮಾಂಗಿ | ಉದಾತ ಚರಿತಾಳೆ |

ಊರ್ಧ್ವಗತಿಗೆ ಭಕ್ತರ ಔಯುವ | ಊಹೆಗೆ ಮಿಗಿಲಾಳೇ |
|| ಅಂಬಾ || ತ್ರಿಲೋಕಪಾವನಿಯೇ |

ಋಷಿ ಮುನಿ ಪೂಜಿತೆ | ಋಣ ವಿಮೋಚನಿ | ಎಣಿಕೆಗೆ ಸಿಗದವಳೇ |
ಐಸಿರಿ ಪಾಲಿಪ | ಐಹಿಕ ವರ್ಜಿತ | ಐರಾವತ ವಾಹಿನಿಯ |
|| ಅಂಬಾ || ತ್ರಿಲೋಕಪಾವನಿಯೇ |

ಒಲಿಸಿಕೊಳ್ಳುವಳು | ಒಲೈಸುವಳು | ಔದಾತ ಹೃದಯಾಳೇ |

ಅಂತರ್ ಮುಖಯಾಮಿನಿ | ಅಂತಹ ಕರಣದಿ ನಿಂತು | ಸರ್ವರಪಾಲಿಪಳೇ |

|| ಅಂಬಾ || ತ್ರಿಲೋಕಪಾವನಿಯೇ |

# ತಾಯಿಯ ಮಹಿಮೆ

ಅಂಬಾ , ಪಾವನಿ ಲೋಕ ಜನನಿ
ನೀನೆ ಚಿರ ಸುಖ ದಾಯಿನಿ |
ಮಂದಹಾಸದಿ ಕರುಣೆ ಹರಿಸುವ
ಜ್ಞಾನ ಪ್ರೀತಿ ದಾಯಿನಿ | ಶಿವಕಾಮೇಶ್ವರಿ ತಾಯೇ ನೀ |೧|

ಅಸುರ ಮರ್ದಿನಿ , ದೀನ ರಕ್ಷಿಣಿ
ಸಕಲ ಪಾಪ ವಿನಾಶಿನಿ |
ನಾದ ರೂಪದಿ , ಭುವನ ಪಾಲಿಪ
ಅಮೃತತತ್ವ ಪ್ರದಾಯಿನಿ | ಶಿವಕಾಮೇಶ್ವರಿ ತಾಯೇ ನೀ |೨|

ಕೋಟಿ ಸೂರ್ಯನ ಪ್ರಭೆಯ ಬೀರುವ
ಕಾಮಿತಾರ್ಥ ಪ್ರದಾಯಿನಿ |
ಚಿದಂಬರೇಶನ ವಾಮ ಭಾಗಿನಿ
ಶಿವಕಾಮಿ ಓಂ ಆನಂದಿನಿ | ಶಿವಕಾಮೇಶ್ವರಿ ತಾಯೇ ನೀ |೩|

ವಾರಾಹಿ, ವೈಷ್ಣವಿ , ಬ್ರಾಹ್ಮೀ , ಮಾಹೇಶ್ವರಿ
ಅಷ್ಟ ಮಾತೃಕಾ ರೂಪಿಣಿ |
ಸಕಲ ಸೃಷ್ಟಿಯ ಮಡಿಲಲ್ ಪೊರೆವ
ಮಾತಾ ವಾತ್ಸಲ್ಯ ದಾಯಿನಿ | ಶಿವಕಾಮೇಶ್ವರಿ ತಾಯೇ ನೀ |೪|

ಶ್ರೀ ಚಕ್ರವಾಸಿನಿ , ಅನಂತ ರೂಪಿಣಿ
ದಶ ಮಹಾವಿದ್ಯಾ ದಾಯಿನಿ |
ಅನೇಕ ಕೋಟಿ ಬ್ರಹ್ಮಾಂಡ ಜನನಿ
ಆದಿ ಪರಾಶಕ್ತಿ ತಾಯೆ ನೀ | ಶಿವಕಾಮೇಶ್ವರಿ ತಾಯೇ ನೀ |೫|

ಸಹಸ್ರದಳ ಪದ್ಮ ವಾಸಿನಿ
ಶಿವ ಶಕ್ತ್ಯೈಕ ರೂಪಿಣಿ |
ತಾಯೆ , ದಕ್ಷಿಣಾಮೂರ್ತಿ ರೂಪದಿ
ಶಿವಪ್ರೇಮಾನಂದ ದಾಯಿನಿ | ಶಿವಕಾಮೇಶ್ವರಿ ತಾಯೇ ನೀ |೬|

# ಆಶೀರ್ವಾದ ಭೂತಾಯಿಗೆ

ಆಶೀರ್ವಾದವು ವಸುಂಧರೆ ನಿನಗೆ
ಶುಭ ಸಿದ್ಧ ಸ್ಪಂದನದಿಂದ |ಪ| ಆಶೀರ್ವಾದವು ವಸುಂಧರೆ ನಿನಗೆ ||

ಹಿರಣ್ಯ ಗರ್ಭದಿ ಉದಿಸಿದೆಯಮ್ಮ
ಸಕಲ ಸೃಷ್ಟಿಯು ವಿಸ್ಮಯವಮ್ಮ
ಜನ್ಮ ನೀಡಿದ ತಾಯೀ ನೀನು
ಪ್ರಕೃತಿಯೇ ಚೇತನವಮ್ಮ |೧| ಆಶೀರ್ವಾದವು ವಸುಂಧರೆ ನಿನಗೆ ||

ಸಕಲ ಚರಾಚರ ವಸ್ತುಗಳಿಗೆ
ಜೀವ , ಜಂತು, ಜಲ ಚರಗಳಿಗೆ
ಬೆಟ್ಟ, ಪರ್ವತ ಶ್ರಣೀಗಳಿಗೇ
ವನ, ಸಿರಿ ಸಂಪತುಗಳಿಗೇ | ೨| ಆಶೀರ್ವಾದವು ವಸುಂಧರೆ ನಿನಗೆ ||

ಅನಂತ ಕೋಟಿ ಬ್ರಹ್ಮಾಂಡಗಳಿಗೆ
ಸೂರ್ಯ, ಚಂದ್ರ ನವಗ್ರಹಗಳಿಗೆ
ನಿನ್ನ ಸೃಷ್ಟಿಯ ಮಾನವರಿಗೆ
ಮೃಗ ಪ್ರಾಣಿ ಪಕ್ಷಿಗಳಿಗೇ |೩| ಆಶೀರ್ವಾದವು ವಸುಂಧರೆ ನಿನಗೆ ||

ಪ್ರಣವ ನಾದದ ಸ್ಪಂದನದಿಂದ
ಸಕಲ ಸೃಷ್ಟಿಯ ಅಸ್ತಿತ್ವವು
ನಿನಗರ್ಪಿತ ಗಾನವಿದಮ್ಮಾ
ನಿನ್ನ ಸೇವೆಯ ಭಾಗ್ಯವಿದಮ್ಮಾ |೪| ಆಶೀರ್ವಾದವು ವಸುಂಧರೆ ನಿನಗೆ ||

ಶಾಂತಿ, ಪ್ರೀತಿ ಕರುಣೆಯಿಂದ
ಸುಖ, ಸಮೃದ್ಧಿ , ಸೌಹಾರ್ದತೆಯಿಂದ
ಕೂಡಲಿ ನಮ್ಮ ಭೂಮಂಡಲವೆಂದು
ಸ್ವರ್ಣ ಸಿದ್ಧ ಬೆಳಕಿನಿಂದ |೫| ಆಶೀರ್ವಾದವು ವಸುಂಧರೆ ನಿನಗೆ ||

# ಪೂಜೆ

ಯಾವ ಪರಿಯಲಿ ಪೂಜಿಸಲಮ್ಮ
ಯಾವ ರಾಗದಿ ಬಣ್ಣಿಸಲಮ್ಮ
ಯಾವ ಪುಷ್ಪದಿ ಅರ್ಚಿಸಲಮ್ಮ
ಯಾವ ಮಂತ್ರದಿ ಜಪಿಸಲಿ ಅಮ್ಮಾ |೧|

ಜನ್ಮ ಜನ್ಮದ ಬಂಧು ನೀನಮ್ಮ
ಜಗದೋಧಾರಿಣೀ ನೀನೆ ಅಮ್ಮಾ
ಜರಿಯಲಿ ನಿನ್ನ ನಾ ಹೇಗೆ ಅಮ್ಮಾ
ಜೀವ ವಿಕಾಸವು ನಿನ್ನಿಂದ ಅಮ್ಮಾ |೨| ಯಾವ ಪರಿಯಲಿ ಪೂಜಿಸಲಮ್ಮ |

ಋಷಿ ಮುನಿ ಹೃದಯ ನಿವಾಸಿನಿ ಅಮ್ಮಾ
ಋಣ ವಿಮೋಚನಿ ನೀನೆ ಅಮ್ಮಾ
ಶಿವ ಶಕ್ತಿ ನವ ದುರ್ಗೆ ನೀನೆ ಅಮ್ಮಾ
ಶಿವ ಕಾಮೇಶ್ವರಿ ನೀನೆ ಅಮ್ಮಾ |
ಮೂಲವರ್ಗ ಮಾತೆಯು ನೀನೆ ಅಮ್ಮಾ |೩| ಯಾವ ಪರಿಯಲಿ ಪೂಜಿಸಲಮ್ಮ |

ಹೋಮ ಹವನದಿ ಹವಿಸ್ಸು ನೀಡಲೇ
ಶ್ರೀಚಕ್ರ ಪೂಜೆಲಿ , ಸೇವಿಸಲೇ ಅಮ್ಮಾ
ಪಂಚ ಭಕ್ಷ್ಯ ಪರಮಾನ್ನ ಅರ್ಪಿಸಲೇ ಅಮ್ಮಾ
ಶರಣು ಭಾವದಿ , ಒಂದಾಗಲೇ ಅಮ್ಮಾ |೪| ಯಾವ ಪರಿಯಲಿ ಪೂಜಿಸಲಮ್ಮ |

ದೇಹದ ಗುಡಿಯಲ್ಲಿ ನೆಲಸಿಹೆ ಅಮ್ಮಾ
ಮೌನ ರಾಗದಿ ಹಾಡುವೆನಮ್ಮ |
ಹೃದಯ ಕಮಲದಿ ಪೂಜಿಪೆನಮ್ಮ
ಸಂತೃಪ್ತಿ ಭಾವದಿ ಆರ್ಚಿಪೆನಮ್ಮ |
ಆತ್ಮ ಜ್ಯೋತಿಯ ಬೆಳಗುವೆನಮ್ಮ |೫|

ಶಿವ ಕಾಮೇಶ್ವರಿ ನೀನೆ ನಮ್ಮಮ್ಮ |
ಶಿವ ಕಾಮೇಶ್ವರಿ ನೀನೆ ನಮ್ಮಮ್ಮ |
ಮೂಲವರ್ಗ ಮಾತೆಯು ನೀನೆ ನಮ್ಮಮ್ಮಾ ||

# <u>ಪರಮ ಕಲ್ಯಾಣಿ ಶಿವಕಾಮೇಶ್ವರಿ</u>

ಪರಮ ಕಲ್ಯಾಣಿ |ಜನನಿ| ಶಿವಕಾಮೇಶ್ವರಿಯೇ |ಪ|

ಭಕ್ತರ ಪೊರೆಯುವ | ಭಕ್ತಿಯನೀಡುವ|
ಭವ , ಸಾಗರ ದಾಟಿಸು ಬಾ |ತಾಯೀ | ಶಿವಕಾಮೇಶ್ವರಿಯೇ |೧|

ಭಾಗ್ಯದ ನಿಧಿಯೇ | ಭಯದ ನಿವಾರಿಣಿಯೇ|
ಹೃದಯ ನಿವಾಸಿನಿಯೇ |ಜನನಿ| ಶಿವಕಾಮೇಶ್ವರಿಯೇ |೨|

ಅನುಪಮ ಗುಣನಿಧಿ | ಆತ್ಮನಿವಾಸಿನಿ |
ಆನಂದ ಸಾಗರಿಯೇ |ಜನನಿ | ಶಿವಕಾಮೇಶ್ವರಿಯೇ |೩|

ಮಂತ್ರೇಶ್ವರಿಯೇ | ತಂತ್ರೇಶ್ವರಿಯೇ |
ಯೋಗೀಶ್ವರಿಯೇ| ಜನನಿ | ಶಿವಕಾಮೇಶ್ವರಿಯೇ |೪|

ದಿವ್ಯೇಶ್ವರಿಯೇ ಜ್ಞಾನೇಶ್ವರಿಯೇ|
ನವಚಕ್ರೇಶ್ವರಿಯೇ |ಜನನಿ| ಶಿವಕಾಮೇಶ್ವರಿಯೇ |೫|

ಸಿದ್ಧೇಶ್ವರಿಯೇ | ಮುಕ್ತೇಶ್ವರಿಯೇ|
ದಶ ವಿಧ , ನಾದೇಶ್ವರಿಯೇ | ಜನನಿ| ಶಿವಕಾಮೇಶ್ವರಿಯೇ |೬|

ಹಸಓಂ , ಸೋಹಂ |ನವಕ್ಕರಿ ನಾದದಿ|
ಶಿವಾನಂದ ದಾಯಿನಿಯೇ |ಜನನಿ| ಶಿವಪ್ರೇಮಾನಂದ ದಾಯಿನಿಯೇ |೭|

# ಓಂ ಐಂ ಹ್ರೀಂ ಶ್ರೀಂ ಶಕ್ತಿ ಶಿವಕಾಮೇಶ್ವರಿ

ಜಯ ಜಯ ಶಂಕರಿ ಜಯ ಪರಮೇಶ್ವರಿ , ಶಿವಕಾಮೇಶ್ವರಿ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ |ಪ|

ಜಯ ಜಯ ನಿತ್ಯೆ , ಜಯ ಜಯ ಚಿತ್ರೆ , ಜಯ ಮಹಾ ನಿತ್ಯೆ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ |೧|

ಜಯ ಶಿವದೂತೀ , ಜಯ ಭಗಮಾಲಿನಿ , ಜಯ ವಜ್ರೇಶ್ವರಿ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ |೨|

ಜಯ ಜಯ ಬ್ರಾಹ್ಮೀ , ಜಯ ಮಾಹೇಶ್ವರಿ , ಜಯ ಕೌಮಾರಿ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ | ೩ |

ಜಯ ಜಯ ದುರ್ಗೆ , ಜಯ ಚಾಮುಂಡೇ , ಜಯ ಮಾಹೇಂದ್ರಿ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ | ೪ |

ಜಯ ಜಯ ಶಾಂಭವಿ , ಜಯ ಜಯ ಸರಸ್ವತಿ, ಜಯ ಮಹಾಲಕ್ಷ್ಮೀ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ |೫|

ಜಯ ತ್ರಿಪುರೇಶಿ, ಜಯ ತ್ರಿಪುರಸವಾಸಿನಿ , ಜಯ ತ್ರಿಪುರಾಂಬಾ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ | ೬|

ಜಯ ಶಿವಕಾಮಿನಿ , ಮೂಲವರ್ಗ ಮಾತಾ , ಶಿವಪ್ರೇಮಾನಂದ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ | ೭|

ಜಯ ಜಯ ಮಂಗಳೆ , ನಿತ್ಯಸುಮಂಗಳೇ, ಜಯ ಸರ್ವಮಂಗಳೇ ಪಾಲಯ ಮಾಂ |
ಓಂ ಶಕ್ತಿ , ಐಂ ಶಕ್ತಿ, ಹ್ರೀಂ ಶಕ್ತಿ , ಶ್ರೀಂ ಶಕ್ತಿ ; ಶಿವಕಾಮೇಶ್ವರಿ ಪಾಲಯ ಮಾಂ | ೮ |

ಓಂ ಐಂ ಹ್ರೀಂ ಶ್ರೀಂ ; ಶಿವಕಾಮೇಶ್ವರಿ ಪಾಲಯ ಮಾಂ ||

# ಓಂ ಜಗತ್ ಜನನಿ ಶಿವಕಾಮೇಶ್ವರಿ

ಓಂ ಜಗತ್ ಜನನಿ ; ಜಯ ಜಗತ್ ಜನನಿ | ಅಂಬಾ | ಶಿವಕಾಮೇಶ್ವರಿ ; ಶ್ರೀ ಜಗತ್ ಜನನಿ |ಪ|

ತ್ರಿಲೋಕಪಾಲಿನಿ , ಓಂ ಜಗತ್ ಜನನೀ |
ತ್ರಿಜಗವಿಖ್ಯಾತೆ, ಜಯ ಜಗತ್ ಜನನೀ |೧|

ಹೃದಯ ನಿವಾಸಿನಿ , ಓಂ ಜಗತ್ ಜನನೀ |
'ಹ್ರೀಂ' ಶರೀರಿಣೀ , ಜಯ ಜಗತ್ ಜನನೀ |೨|

ಮಹಾ ಮಹೇಶ್ವರಿ , ಓಂ ಜಗತ್ ಜನನೀ |
ಮಹಾ ಮಹಾ ರಾಜ್ಞಿ , ಜಯ ಜಗತ್ ಜನನೀ |೩|

ಅಖಂಡ ಜ್ಯೋತಿ, ಓಂ ಜಗತ್ ಜನನೀ |
ಅಖಿಲಾಂಡೇಶ್ವರಿ , ಜಯ ಜಗತ್ ಜನನೀ |೪|

ಪ್ರೇಮ ಸ್ವರೂಪೇ , ಓಂ ಜಗತ್ ಜನನೀ |
ಶಿವಾನಂದ ದಾಯಿನಿ, ಜಯ ಜಗತ್ ಜನನೀ |೫|

ಶಿವಕಾಮಿನಿ ಓಂ, ಓಂ ಜಗತ್ ಜನನೀ |
ಮೂಲವರ್ಗ ಮಾತಾ , ಜಯ ಜಗತ್ ಜನನೀ |೬|

ಶಿವ ಶಕ್ತಿ ರೂಪೇ , ಓಂ ಜಗತ್ ಜನನೀ |
ಶಿವಕಾಮೇಶ್ವರಿ, ಜಯ ಜಗತ್ ಜನನೀ |೭|

# ಮಂಗಳ ಹಾಡು

ಶರಣು ಮಂಗಳಂ ಶಿವ ಶಕ್ತಿಗೆ |

ಶರಣು ಮಂಗಳಂ ನಂದಿ ದೇವನಿಗೆ |

ಶರಣು ಮಂಗಳಂ ಶಿವ ಗಣಗಳಿಗೆ |

ಶರಣು ಮಂಗಳಂ ಸದ್ಗುರು ಮೂಲಾಂಜಿಗೆ |

ಶರಣು ಮಂಗಳಂ ಸರ್ವ ಸಿದ್ದರೀಗೆ |

ಶರಣು ಮಂಗಳಂ ಶಿವಕಾಮಿ ಅಮ್ಮನಿಗೆ |

ಶರಣು ಮಂಗಳಂ ಶಕ್ತಿ ಸ್ವರೂಪಿಣಿಗೆ |

ಶರಣು ಮಂಗಳಂ ಶಿವಪ್ರೇಮಾನಂದರಿಗೆ |

ಶರಣು ಮಂಗಳಂ ಜ್ಞಾನ ದಾತನಿಗೆ |

ಶರಣು ಮಂಗಳಂ ಶಿಷ್ಯೋಧಾರಕಗೆ |

ಶರಣು ಮಂಗಳಂ ಮೂಲವರ್ಗ ಪರಂಪರೆಗೆ |

ಶರಣು ಮಂಗಳಂ ಶಿವ ಭಕ್ತರೀಗೆ |

ಶರಣು ಮಂಗಳಂ ಶಾಕ್ತರಿಗೆ |

ಶರಣು ಮಂಗಳಂ ಸದ್ಭಕ್ತರೀಗೆ |

|| ಶರಣು ಮಂಗಳಂ ಜಯ ಶರಣು ಮಂಗಳಂ ||

|| ಶರಣು ಮಂಗಳಂ ಶುಭ ಶರಣು ಮಂಗಳಂ ||

<u>ಗುರು ಪಾದ ವೈಭವ</u>

ಮೊರೆ  ಹೊಕ್ಕೆನೋ  ಗುರುವೇ , ನಿನ್ನ ಪಾದ ಕಮಲಾವನ್ನು
ಸಕಲ ಬ್ರಹ್ಮಾಂಡಾವೆ , ಅಡಗಿರುವ ದಿವ್ಯ ಪಾದ  |ಪ|

ಕಮಲಾ ದಂತಹ  ಪಾದ ; ರೂಪ ಅರೂಪನ ಪಾದ |
ಸೂರ್ಯ ಚಂದ್ರರ  ಚಿನ್ಹೆ , ಹೊಂದಿರುವ  ದಿವ್ಯ ಪಾದ |
ಶ್ವೇತಾ ಹಂಸದಹಾಗೆ , ನಿರ್ಮಲವಾದ ನಿಮ್ಮ ಪಾದ |
ಐರಾವತಾನಂಥೆ , ವೈಭವಾವದ  ದಿವ್ಯ ಪಾದ  |೧|

ನಾನಾ ಜನ್ಮದ ಪುಣ್ಯದಿ, ಪಡೆದಿಹ ನಿಮ್ಮ ಪಾದ |
ತಾಯೆ ಮಡಿಲೀನಂತೆ , ಮಮತೆಯ ದಿವ್ಯ ಪಾದ  |
ಗಂಗಾ ತುಂಗೆಯ  ಹಾಗೇ ,  ಪವಿತ್ರವಾದ ನಿಮ್ಮ ಪಾದ |
ಸಕಲ ಬ್ರಹ್ಮಾಂಡದಲ್ಲಿ , ವ್ಯಾಪ್ತವಾದ ದಿವ್ಯ  ಪಾದ  |೨|

ಪಾದ ಧೂಳೀನಿಂದ , ಪಾಪ ಕಳೆಯೀತೆಲ್ಲ |
ಪಾದ ದರ್ಶನ ದಿಂದ , ಪುನೀತರಾದೆವೋ ಎಲ್ಲ |
ಪಾದ ಪೂಜೆಯಿಂದ , ಪಾವನಾ ವಾಯಿತೆಲ್ಲ |
ಪಾಮರರ ಬದುಕಿಗೆ , ಆಸರೆಯೇ ನಿಮ್ಮ ಪಾದ | ೩|

ಮೂರೂ ಲೋಕಾದಲ್ಲೂ , ಪೂಜಿಪ  ನಿಮ್ಮ ಪಾದ |
ಸಚ್ಚಿದಾನಂದನ ಪಾದ , ಪರಬ್ರಹ್ಮನ ದಿವ್ಯಾ ಪಾದ |
ಶಿವ ಶಕ್ತಿಯರ ಪಾದ , ಸದ್ಗುರು ನಿಮ್ಮ ಪಾದ |
ಶರಣು ಹೊಕ್ಕವರ , ಕಾಯುವ ದಿವ್ಯ ಪಾದ  |೪|

# ಗುರುದೇವ ಬಂದೆ

ಗುರು ದೇವಾ ಬಂದೆ, ಮಹಾ ಯೋಗಿ ಮನೆಗೆ ಬಂದೆ |
ಸಿದ್ದ ಪುರುಷ ನಿವನು , ಜನ ಸೇವೆ ಗಾಗಿ ನಿಂದೆ |ಪ|

ಅಭಯ ಹಸ್ತದಲ್ಲಿ , ನಗೆಯ ಭಾವ ಚೆಲ್ಲಿ |
ಸಹಸ್ರ ಚಂದ್ರ ಬೆಳಕ , ಮುಖದಿ ಹೊತ್ತು ಬಂದೆ |
ಪ್ರಬುದ್ದ ಪುರುಷನಿವನು , ಬುದ್ದನಾಗಿ ನಿಂದೆ |
ವೀರ ಧೀರನಿವನು , ಮಹಾವೀರನಾಗಿನಿಂದೆ |೧|

ದೇವ ದೇವನಿವನು , ಜ್ಞಾನ ಪ್ರಾಕಾಶನು |
ರೂಪ ಆರೂಪನು , ಸತ್ಯ ಸ್ವರೂಪನು |
ನಿತ್ಯ ತೃಪ್ತನಿವನು , ನಿರ್ಮಲಾತ್ಮಕನು |
ನಿರ್ಮಲ ಮನದಂಗಳದಿ , ವಾಸಮಾಡೆ ಬಂದೆ |೨|

ಕರುಣ ರೂಪದಲ್ಲಿ , ವರವ ನೀ ಡೆ ಬಂದೆ |
ಪಾದ ಧೂಳಿನಿಂದ , ಪಾಪ ಕಳೆಯೆ ಬಂದೆ |
ಸಚ್ಚಿದಾನಂದನು , ಪ್ರೀತಿ ಭಾವವೆಲ್ಲ |
ಮಾಯಾ ಮೋಹವಿಲ್ಲ, ಜಾತಿಭೇದವಿಲ್ಲ | ೩|

ಘನ್ನ ಮಹಿಮನಿವನು , ಮೂಲವರ್ಗನಿವನು |
ತಂದೆ ತಾಯೆ ಇವನು, ಬಂಧು ಬಳಗನಿವನು |
ನವ ವಿಧ ,ಭಕ್ತಿಗೆ ಒಲಿದು ಓಡಿ ಬಂದೆ |
ಜಗವ ಉದ್ದರಿಪ ಗುರುವು , ಧರೆಗೆ ಒಲಿದು ಬಂದೆ |೪|

# <u>ಗುರು ಪಾದ ನಂಬಿಕೆ</u>

ನಂಬಿದೇನೋ , ನಿನ್ನ ಪಾದವ ಸದ್ಗುರುನಾಥನೇ |ಪ|
ಭವದ ಭಾರವ ಕ್ಷಣದಲಿ ಇಳಿಸಿ |
ಭುವನವ ಪಾಲಿಪ ದಿವ್ಯ ಪಾದವ |ಅಪ|

ವಿಧ ವಿಧ ಯೋನಿಯೊಳ್ ಜನ್ಮವ ಪಡೆದು
ಮೋಹ ಪಾಶ ಬಲೆಯಲು ಬಿದ್ದು |
ಗತಿ ಕಾಣದೆ , ಮತಿ ಹೀನನಾಗಿ
ಸತ್ಯವ ತೋರುವ, ಗುರು ಪಾದವ ಕಂಡೆ |೧|

ಸರಳ ಭಕ್ತಿ , ನಿಶ್ಚಲ ಮನಸು
ನಿರ್ಮಲ ಹೃದಯದ ಪ್ರೀತಿಯ ಕರೆಯ |
ಮಮತೆಯ ಕೂಗಿಗೆ ಓಡಿ ಬಂದು
ಬೇದ ಎಣಿಸದೇ ಭವವ ದಾಟಿಸೋ |೨|

ತೀರ್ಥ ಕ್ಷೇತ್ರ, ಪುಣ್ಯ ಸ್ನಾನ
ಹೋಮ ಹವನ , ವಿಧ ವಿಧ ಸಾಧನ |
ಶರಣು ಬಂದ ಭಕ್ತರ ಕಾಯುವ
ಸದ್ಗುರು ಪಾದ , ಸೇವೆಯೇ ಸಾಕು |೩|

ಜ್ಞಾನಾಮೃತವ ಜಗಕೆ ಉಣಿಸಿ
ಜಗದೋಧರಣಕೆ ಜೀವವ ಅರ್ಪಿಸಿ |
ಜಿಜ್ಞಾಸುವಿನ ದಾಹವ ತಣಿಸಿ
ಮುಮುಕ್ಷುಗೆ , ಮೋಕ್ಷವ ನೀವ |೪|

# <u>ಮಡಿಲಿನಾಸರೆ ಅಮ್ಮ</u>

ನಿನ್ನ ಮಡಿಲಿನಾಸರೆಯ , ಬಯಸಿ ಬಂದಿಹೆ ನಮ್ಮ |
ಬಾಗಿಲಲು ನಿಂದಿಹೆನಮ್ಮ |ಪ|

ಜನ್ಮ ಜನ್ಮದ ಹುಡುಕಾಟ
ಜೀವಕರಿಯದ ತುಡುಕಾಟ |
ದಣಿದು ಬಂದಿಹೆ ನಮ್ಮ, ಮಾಯೆಯಿಂದೆಬ್ಬಿಸಿ ಎನ್ನ
ಮಮತೆಯಿಂದ್ ಅಪ್ಪಿಕೋ ಅಮ್ಮ |೧|

ಮಣಿದ್ವೀಪ ವಾಸಿನಿ ನೀನು
ಕದಂಬವನವಾಸಿನಿ ನೀನು |
ಮಂದಾರ ಪುಷ್ಪ, ಸುಪೂಜಿತೆ ನೀನು
ಜಗತ್ ಜನನಿ ಜಗದಂಬಾ, ಶ್ರೀಚಕ್ರವಾಸಿನಿ ನೀನು |೨|

ಮತ್ಯಾರ ಕರೆಯಲಿ ಅಮ್ಮ
ಮತ್ಯಾರ ನೆನೆಯಲಿ ಅಮ್ಮ |
ಮಿಥ್ಯದಾ ಜಗದಲ್ಲಿ , ಸತ್ಯ ನೀನಲ್ಲವೇ ಅಮ್ಮ
ಜಗತ್ ಜನನಿ ಜಗದಂಬಾ, ಶಿವಕಾಮೇಶ್ವರಿ ಅಮ್ಮ |೩|

ನಿನ್ನ ಹಸ್ತದ ಸ್ಪರ್ಶ , ಹೃದಯ ಕಾಯಿತು ಹರ್ಷ |
ಸವಿಜೇನ ಹೊನಲಂತೇ , ನಿನ್ನ ಮಮತೆಯು ತಾಯೆ
ನಿನ್ನ ಮಮತೆ ಗುಂಗಿನಲಿ, ನಿನ್ನಲೊಂದಾದೆನೋ ತಾಯೆ |
ಜಗತ್ ಜನನಿ ಜಗದಂಬಾ, ಶಿವಕಾಮೇಶ್ವರಿ ಅಮ್ಮ |೪|